ಸಿ.ಸಿ.1108/2023 ಪಿಡಬ್ಲ್ಯೂ-2

ದಿನಾಂಕಃ 27.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಟಿ.ಎನ್ ವಕೀಲರಿಂದಃ**

ಆರೋಪಿಯು ಪಿರ್ಯಾದಿ ಸಂಸ್ಥೆಯ ಗ್ರಾಹಕರು ಎಂದು ತೋರಿಸಲು ಖಾತೆಯ ಮುಖಾಂತರ ವ್ಯವಹರಿಸಿರುವ ಬಾಬ್ತು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ವಿಷಯದ ಕುರಿತು ಯಾವುದೇ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಯು ಪಿರ್ಯಾದಿ ಸಂಸ್ಥೆಗೆ ಕಾಫೀಯನ್ನು ಜಾಮಾ ಮಾಡಿರುವುದು ಮತ್ತು ಹಣವನ್ನು ಸ್ವೀಕರಿಸಿರುವ ಕುರಿತು ಅದರ ಲೆಡ್ಜರ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲಾತಿಯನ್ನು ನಮ್ಮ ತಿಳುವಳಿಕೆಗೆ ಬೇಕಾದ ಬಾಬ್ತು ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ರಲ್ಲಿ ತೋರಿಸಿರುವ ಓಚರ್ ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-7 ಮತ್ತು 8 ರಲ್ಲಿ ಆರೋಪಿಯು ನಮ್ಮ ಸಂಸ್ಥೆಗೆ ಜಮಾ ಮಡಿರುವ ಕಾಫೀ ಯ ಕುರಿತು ಮತ್ತು ಅವರು ಬಾಕಿ ಉಳಿಸಿಕೊಂಡಿರುವ ಹಣ ತಿಳಿದುಬಂದಿರುವುದಿಲ್ಲ. ಸದರಿ ದಾಖಲಾತಿಯನ್ನು ನೋಡಿ ಸಾಲದ ಹಣವನ್ನು ಗುರುತಿಸಲಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ನಿಪಿ-7 ಮತ್ತು 8 ರ ದಾಖಾಲಾತಿಯನ್ನು ಹೊರತುಪಡಿಸಿ ಆರೋಪಿಯ ಉಳಿಕೆ ವ್ಯವಹಾರವನ್ನು ತೋರಿಸಲು ಯಾವುದೇ ದಾಖಲಾತಿಗಳು ಇರುವುದಿಲ್ಲ.

ಸದರಿ ದಾಖಲಾತಿಗಳನ್ನು ಯಾರು ಬೇಕಾದರೂ ಕಂಪ್ಯೂಟರ್ ನ ಮುಖಾಂತರ ಸೃಷ್ಟಿಸಬಹುದು ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳು ಯಾವುದೇ ಡಿಜಿಟಲ್ ಸಹಿಯನ್ನು ಒಳಗೊಂಡಿರುವುದಿಲ್ಲ ಎಂದರೆ ಸರಿ. ನಿಪಿ-7 ಮತ್ತು 8 ಕ್ಕೆ ನಾನೇ ಸಹಿಯನ್ನು ಮಾಡಿ ನೀಡಿರುತ್ತೇನೆ. ಸದರಿ ದಾಖಲಾತಿಯನ್ನು ತೆಗೆದಿರುವ ಕುರಿತು ದಿನಾಂಕ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ-7 ಮತ್ತು 8 ರಲ್ಲಿ ಪಾಲುದಾರರ ಸಹಿ ಇರುವುದಿಲ್ಲ ಎಂದರೆ ಸರಿ. ಸದರಿ ದಾಖಲಾತಿಗಳನ್ನು Income Tax returns ತೋರಿಸಲು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಆರೋಪವನ್ನು ಮಾಡಲಾಗುತ್ತಿದೆ ಎಂದರೆ ಸರಿಯಲ್ಲ. ನಿಪಿ-7 ಮತ್ತು 8, ನಿಪಿ-17 ರಿಂದ 19 ಕ್ಕೆ ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-17 ರಿಂದ 19 ರಲ್ಲಿ ಪ್ರತ್ಯೇಕವಾಗಿ ಆ ವರ್ಷದ ಬಾಕಿ ಮೊತ್ತವನ್ನು ನಮೂದಿಸಲಾಗಿರುತ್ತದೆ. ನಿಪಿ-17 ರಿಂದ 19 ರ ಪ್ರಕಾರ ಆರೋಪಿಯ ಉಳಿಕೆ ಮೊತ್ತದ ಬಾಬ್ತು ಯಾವುದೇ ತಿಳುವಳಿಕೆ ಪತ್ರವನ್ನು ನೀಡಿರುವುದಿಲ್ಲ. ಆರೋಪಿಯೊಂದಿಗೆ ವ್ಯವಹಾರದ ಬಾಬ್ತು ನಿಪಿ-7, 8 ಮತ್ತು 17 ರಿಂದ 19 ನ್ನು ಹೊರತುಪಡಿಸಿ ಇನ್ಯಾವುದೇ ದಾಖಲಾತಿಗಳನ್ನು ಹಾಜರುಮಾಡಿರುವುದಿಲ್ಲ ಎಂದರೆ ಸರಿ.

ಇದನ್ನು ಹೊರತುಪಡಿಸಿ ಇನ್ಯಾವುದೇ ದಾಖಲಾತಿಗಳು ಆರೋಪಿಯ ವ್ಯವಹಾರದ ಬಾಬ್ತು ನಮ್ಮ ಬಳಿ ಇರುವುದಿಲ್ಲ. ಪಿರ್ಯಾದಿ ಸಂಸ್ಥೆ ಮತ್ತು ಆರೋಪಿ ಮಧ್ಯೆ ಇರುವ ವ್ಯವಹಾರದ ಬಗ್ಗೆ ನನಗೆ ತಿಳಿಯದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ

ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿಯು ಪಿರ್ಯಾದಿ ಸಂಸ್ಥೆಯೊಂದಿಗೆ ಯಾವುದೇ ವ್ಯವಹಾರ ಸಂಭಂದ ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಪಿರ್ಯಾದಿ ಸಂಸ್ಥೆಯೊಂದಿಗೆ ಯಾವುದೇ ಉಳಿಕೆ ಮೊತ್ತವನ್ನು ಉಳಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಹೊರತು ಇತರ ಯಾವುದೇ ದಾಖಲಾತಿಗಳು ನಮ್ಮ ಬಳಿ ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮೂದಿಸಿರುವ ಮೊತ್ತವನ್ನು ಮರುಪಾವತಿಸುವ ಹೊಣೆಗಾರಿಕೆ ಆರೋಪಿಗೆ ಮೇಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಆರೋಪಿಯು ಪಿರ್ಯಾದಿ ಸಂಸ್ಥೆಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನೊರ್ಬರ್ಲ್ಟ್ ಸಾಲ್ಡಾನ ಎಂಬುವವರು ಆರೋಪಿಯು ನೀಡಿದಂತಹ ನಿಪಿ-1 ನ್ನು ದುರುಪಯೋಗಪಡಸಿಕೊಂಡು ಸಂಸ್ಥೆಯ ಮುಖಾಂತರ ಹಾಜುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.